# ವಿಜ್ಞಾನ ಲೋಕ

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಪ್ರಕಟಣೆ

## ದ್ವೈಮಾಸಿಕ ನಿಯತಕಾಲಿಕೆ

ಸಂಪುಟ : 19 ಸಂಚಿಕೆ : 3 ಸೆಪ್ಟೆಂಬರ್–ಅಕ್ಟೋಬರ್ 2025

ಅಧ್ಯಕ್ಷರು
**ಪ್ರೊ. ರಾಜಾಸಾಬ್ ಎ.ಎಚ್.**

ಪ್ರಧಾನ ಸಂಪಾದಕರು
**ನಾಡೋಜ ಡಾ. ಪಿ. ಎಸ್. ಶಂಕರ್**

ಪ್ರಕಾಶಕರು
**ಡಾ. ಆರ್. ಆನಂದ್**
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ

ಸದಸ್ಯರು
ಡಾ. ವಸುಂಧರಾ ಭೂಪತಿ — ಡಾ. ಎಂ. ಕೆ. ನಾಯಕ್
ಡಾ. ಪ್ರಭಾಕರ ಸಂಗೂರಮಠ — ಡಾ. ಹುಲಿಕಲ್ ನಟರಾಜ್
ಶ್ರೀ ಕೃಷ್ಣಮೂರ್ತಿ ಮಂಜುನಾಥ — ಡಾ. ಆನಂದ್ ಆರ್, ಕವಿತಂಅ

ಕಛೇರಿ :
**ಪ್ರೊ. ಯು. ಆರ್. ರಾವ್ ವಿಜ್ಞಾನ ಭವನ
ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಆವರಣ,
ಮೇಜರ್ ಉನ್ನಿಕೃಷ್ಣನ್ ರಸ್ತೆ, ದೊಡ್ಡ ಬೆಟ್ಟಹಳ್ಳಿ
ವಿದ್ಯಾರಣ್ಯಪುರ ಪೋಸ್ಟ್, ಬೆಂಗಳೂರು–560 097
ದೂರವಾಣಿ–ಫ್ಯಾಕ್ಸ್ 080–29721550**

ಸಂಚಿಕೆ ವಿನ್ಯಾಸ ಮತ್ತು ತಯಾರಿಕೆ :
**ಡಾ. ಪಿ.ಎಸ್. ಶಂಕರ ಪ್ರತಿಷ್ಠಾನ**
ಕಲಬುರಗಿ

**ಲೇಖನಗಳಲ್ಲಿ ಮೂಡಿ ಬರುವ ಅಭಿಪ್ರಾಯಗಳು ಲೇಖಕರ ಸ್ವಂತ ಅಭಿಪ್ರಾಯಗಳಾಗಿದ್ದು, ಈ ಅಭಿಪ್ರಾಯಗಳಿಗೆ ಅಕಾಡೆಮಿಯು ಹೊಣೆಯಾಗುವುದಿಲ್ಲ.**

| ಚಂದಾದಾರಿಕೆ | ವೈಯಕ್ತಿಕ | ಸಾಂಸ್ಥಿಕ |
|---|---|---|
| ಬಿಡಿ ಪ್ರತಿ | ರೂ. 50/– | ರೂ. 500/– |
| ವಾರ್ಷಿಕ | ರೂ. 300/– | ರೂ. 1500/– |

ಮುದ್ರಣ :
ವಿನಯ್ ಎಂಟರ್‌ಪ್ರೈಸಸ್
ಚಾಮರಾಜಪೇಟೆ, ಬೆಂಗಳೂರು–೧೮

## ಒಳಗೇನಿದೆ

ಸಂಪಾದಕೀಯ
* ಏಕಾಏಕಿ ಹೃದಯಜನ್ಯ ಸಾವು ೨
* ಹಸಿರು ಕ್ರಾಂತಿಯ ಪಿತಾಮಹ 'ಭಾರತರತ್ನ' ಪ್ರೊ. ಎಂ.ಎಸ್. ಸ್ವಾಮಿನಾಥನ್ ಅವರ ಜನ್ಮಶತಾಬ್ದಿ – ಎಂ.ಎಸ್. ಎಸ್. ಮೂರ್ತಿ ೪
* ಭಾರತ ಜಾಗತಿಕ ವಿಜ್ಞಾನದ ಚುಂಬಕವಲ್ಲ – ಪ್ರೊ.ವಿ.ರಾಮಕೃಷ್ಣನ್ ೮
* ನಾವು ಎಲ್ಲಿದ್ದೇನೆ ಮತ್ತು ಎಲ್ಲಿಗೆ ಹೋಗುತ್ತೇವೆ? – ಡಾ.ಎಂ.ವೆಂಕಟಸ್ವಾಮಿ ೧೦
* ಮಾತ್ರಾ ರಹಸ್ಯ ಲಿಪಿ – ಡಾ. ಡಿ.ಎಂ.ಸಾಗರ್ ೧೩
* ಜಟಾಯು ಪ್ರಕೃತಿ ವನ –ಪ್ರೊ. ಸಿ.ಡಿ.ಪಾಟೀಲ್ ೧೬
* ಪುಸ್ತಕ ವಿಮರ್ಶೆ : ಡಾ. ಡಿ. ಎಂ. ಸಾಗರ್ ಅವರ "ವಿಲಕ್ಷಣ ಜಲಜಾಲ" ೧೮
* ಕರ್ನಾಟಕದ ಪಕ್ಷಿಕಾಶಿ ರಂಗನತಿಟ್ಟು ಪಕ್ಷಿಧಾಮ ಈಗ ರಾಮ್ಸಾರ್ತಾಣವಾಗಿದೆ – ಡಾ. ಹೇಮಾವತಿ ಸಿ.೨೦
* ನವೀಕರಿಸಬಹುದಾದ ಇಂಧನ ಸಂಪನ್ಮೂಲ– ಉಬ್ಬರವಿಳಿತದ ಶಕ್ತಿ – ಶಿವ, ಉಡಚಣ ೨೪
* ಝೆರೋಸೈನ್ಸ್ – ಎಸ್. ಸುಧಾ ೨೬
* ನದಿ ಬಗ್ಗೆ ಆಕರ್ಷಕ ಸಂಗತಿಗಳು – ಸೀತಾರಾಂ ೨೯
* ಪ್ರಸಕ್ತ ವಿದ್ಯಮಾನಗಳ ಪ್ರೇರಕ ರೆನೆ ಡೆಕಾರ್ಟೆ – ಎನ್.ಎಸ್. ಲೀಲಾ ೩೨
* ಮಳೆಗಾಲ ಸಂತಾನೊತ್ಪತ್ತಿಯ ಪರ್ವ ಕಾಲ – ಡಾ. ಶಶಿಕಾಂತ್ ಹೆಚ್. ಮಜಗಿ ೩೪
* DNA ಚಿಪ್ ಎಂಬ ಮಾಯಾಲೋಕದೊಳಗೊಂದು ಟ್ರಿಪ್ – ಶ್ರದ್ಧಾ ಪಿ., ಡಾ. ನವ್ಯಾ ಹೆಚ್.ಎಂ., ಡಾ. ಪ್ರಭುರಾಜೇಶ್ವರ್ ೩೬
* ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ : ಸಂದೇಶ ಮತ್ತು ಸದಸ್ಯರು ೩೯

## ಮುಖಚಿತ್ರ

### ವಿಜಿಂಜಮ್ ಅಂತಾರಾಷ್ಟ್ರೀಯ ರೇವುಪಟ್ಟಣ

ಕೇರಳ ರಾಜಧಾನಿ ತಿರುವನಂದಪುರಂನ ಆಗ್ನೇಯಕ್ಕೆ 16 ಕಿ.ಮೀ ದೂರದ ಕೋವಲಂ ಬೀಚ್‌ಗೆ ಎರಡು ಕಿಲೋ ಮೀಟರ್ ದೂರದಲ್ಲಿ ಸರಕಾರಿ–ಖಾಸಗಿ ಸಹಯೋಗದಲ್ಲಿ, ನೈಸರ್ಗಿಕವಾಗಿ 20 ಮೀಟರ್ ಆಳದ ಅರಬ್ಬಿ ಸಮುದ್ರದ ಕಿನಾರೆಯಲ್ಲಿ ವಿಜಿಂಜಮ್‌ನಲ್ಲಿ 7000 ಕೋಟಿ ಹಣದಲ್ಲಿ ನಿರ್ಮಾಣಗೊಂಡ ಈ ಅಂತಾರಾಷ್ಟ್ರೀಯ ರೇವುಪಟ್ಟಣ ದೇಶದ ದಕ್ಷಿಣ ತುದಿಯಲ್ಲಿರುವ ಮೊದಲ ಆಳ ನೀರಿನ ಕಂಟೇನರ್ ಹಡಗುಗಳಿಗೆ, ಕಾರ್ಗೊ ಹಡಗುಗಳಿಗೆ ನೆಲೆಯನ್ನೊದಗಿಸುವ ಬಹುದೊಡ್ಡ ರೇವು ಪಟ್ಟಣಗಳಲ್ಲಿ ಒಂದಾಗಲಿದೆ. ಸಾವಿರ ವರುಷಗಳ ಹಿಂದೆ ಐ ದೊರೆಗಳ ರಾಜಧಾನಿಯಾಗಿದ್ದ, ಈ ಪ್ರದೇಶ ಈಗ ತನ್ನ ಮಹತ್ವವನ್ನು ಪುನಃ ಪಡೆದುಕೊಂಡಿದೆ. ಇಲ್ಲಿನ ಲೈಟ್ ಹೌಸ್, ಆಯುರ್ವೇದ ಚಿಕಿತ್ಸಾಲಯಗಳು, ಸಾಗರ ಉತ್ಪನ್ನಗಳ ವಸ್ತು ಸಂಗ್ರಹಾಲಯ ಎಲ್ಲರನ್ನು ತನ್ನತ್ತ ಆಕರ್ಷಿಸುತ್ತಿದೆ.

ಸಂಪಾದಕೀಯ

# ಏಕಾಏಕಿ ಹೃದಯಜನ್ಯ ಸಾವು

ನಾಡೋಜ. ಡಾ. ಪಿ.ಎಸ್.ಶಂಕರ್

ಏಕಾಏಕಿ ಹೃದಯ ಜನ್ಯ ಸಾವು ಎಂದರೆ ಸಾವಿನಲ್ಲಿ ಪರ್ಯವಸನಗೊಳ್ಳುವಂತಹ ಸ್ಥಿತಿಯಿಲ್ಲದ ವ್ಯಕ್ತಿಯಲ್ಲಿ ಅತ್ಯಲ್ಪ ಸಮಯದಲ್ಲಿ, ಗುಣಲಕ್ಷಣಗಳು ಗೋಚರಿಸಿದ ಒಂದು ಗಂಟೆಯಲ್ಲಿ ಅಸಹಜ ಅನಿರೀಕ್ಷಿತ ರೀತಿಯಲ್ಲಿ ಮರಣ ಹೊಂದುವುದು. ಜಗತ್ತಿನಾದ್ಯಂತ ಈ ಬಗೆಯ ಸಾವಿನ ಸಂಖ್ಯೆ 7 ಮಿಲಿಯನ್ (ದಶಲಕ್ಷ) ಎಂದು ಲೆಕ್ಕ ಹಾಕಲಾಗಿದೆ.

ಪತ್ರಿಕೆಗಳಲ್ಲಿ, ಟೆಲಿವಿಷನ್‌ಗಳಲ್ಲಿ ಈಚೆಗೆ ಹೃದಯಾಘಾತದ ಸಂಖ್ಯೆ ರಾಜ್ಯದಲ್ಲಿ ವಿಶೇಷವಾಗಿ ಕಾಣಸಿಕ್ಕುತ್ತಿರುವುದರ ಬಗ್ಗೆ ದಿನೇ ದಿನೇ ವರದಿಗಳು ಬರುತ್ತಿದ್ದು ಅದರ ಬಗ್ಗೆ ಜನರು ಆತಂಕಗೊಂಡಿದ್ದಾರೆ. ನಾವು ಅನುಸರಿಸುತ್ತಿರುವ ಜೀವನ ಶೈಲಿ, ಒತ್ತಡದ ಬದುಕು ಈ ರೀತಿಯ ಅವಘಡಕ್ಕೆ ಹಿನ್ನೆಲೆಯನ್ನೊದಗಿಸುತ್ತದೆ ಎಂದು ಎಲ್ಲರ ಭಾವನೆ

ಏಕಾಏಕಿ ಹೃದಯಜನ್ಯ ಸಾವು ಉಂಟಾಗುವುದರ ಕಾರಣ ಹೃತ್ಕುಕ್ಷಿ (ವೆಂಟ್ರಿಕಲ್)ಯ ತತ್ತರಿಕೆ (ಫಿಬ್ರಿಲೇಶನ್). ತತ್ತರಿಕೆ ನಿರೋಧಕ (ಡಿಫಿಬ್ರಿಲೇಶನ್) ಮತ್ತು ಹೃದಯ–ಪುಪ್ಪುಸ ಪುನಶ್ಚೇತನ ವಿಧಾನಗಳು ರೂಪುಗೊಂಡ ಮೇಲೆ ಈ ರೀತಿಯ ಸಾವು ಹೊಂದುವ ವ್ಯಕ್ತಿಗಳು ಬದುಕಿ ಉಳಿಯುವ ಸಾಧ್ಯತೆ ಹೆಚ್ಚಿದೆ.

ಏಕಾಏಕಿ ಹೃದಯ ಜನ್ಯ ಸಾವು ಯಾವುದೇ ವಯೋಮಾನದಲ್ಲಿ ಗುರುತಿಸುವಂತಹ ಹೃದಯರೋಗ ಇದ್ದಾಗ ಇಲ್ಲವೆ ಇಲ್ಲದಾಗ ತೋರಿಬರುವುದು. ಕಿರೀಟ ಧಮನಿ ರೋಗ ಮತ್ತು ಆರಕ್ತತೆಯ (ಇಸ್ಕೀಮಿಯಾ) ಹೃದಯಸ್ನಾಯು ರೋಗಗಳು 50 ವರುಷ ದಾಟಿದವರಲ್ಲಿ ಸಾವಿನ ಪ್ರಮುಖ ಕಾರಣಗಳು. ಇನ್ನು ಚಿಕ್ಕ ವಯಸ್ಕರಲ್ಲಿ ಅಪರೂಪದ ರೋಗಗಳು ಏಕಾಏಕಿ ಸಾವಿನ ಕಾರಣಗಳೆನಿಸಿವೆ.




ಕಿರೀಟ (ಕರೋನರಿ) ಹೃದಯ ರೋಗ ಏಕಾಏಕಿ ಹೃದಯಜನ್ಯ ಸಾವಿನ ಪ್ರಮುಖ ಕಾರಣ. ಕಿರೀಟ ಧಮನಿಯಲ್ಲಿ ಧಮನಿ ಪೆಡಸಣೆ (ಅಥೆರೊಸ್ಕ್ಲೀರೊಸಿಸ್)ಯ ಫಲವಾಗಿ ರೂಪುಗೊಂಡ ಪಕಳೆಗಳು ಭಿನ್ನಗೊಳ್ಳುವುದು, ರಕ್ತಕರಣೆ (ಥ್ರಾಂಬೊಸಿಸ್)ಯ ಫಲವಾಗಿ ಈ ತೊಂದರೆ ಗೋಚರಿಸುತ್ತದೆ. ಅನೇಕರಲ್ಲಿ ಆರಕ್ತತೆಯ ಲಕ್ಷಣಗಳು ತೋರಿ ಬಂದು ಒಂದು ಘಂಟೆಗಿಂತ ಹೆಚ್ಚು ಕಾಲಾವಧಿ ಉಳಿಯುವುದು ಸಾವಿಗೆ ಆಹ್ವಾನ ನೀಡುತ್ತದೆ. ಹಾಗಾಗಿ ಹೃದಯಾಘಾತವೇ ಏಕಾಏಕಿ ಹೃದಯ ಜನ್ಯ ಸಾವಿನ ಪ್ರಮುಖ ಕಾರಣವೆನಿಸಿದೆ. ಈ ರೋಗ ವಿಶೇಷವಾಗಿ ಕುಕ್ಷಿಯ ತತ್ತರಿಕೆ ಇಲ್ಲವೆ ಮಂದಗತಿಯ ಪ್ರಾಸಗೆಡಿಕೆಯನ್ನು ತೋರಿಸುತ್ತದೆ. ಅವುಗಳ ಬೆಳವಣಿಗೆಗೆ ಕುಕ್ಷಿಯ ಅತಿವೇಗ ಬಡಿತ ಹಿನ್ನೆಲೆಯನ್ನು ಒದಗಿಸುತ್ತದೆ.

ಅಲ್ಲದೆ ಹೃದಯಾಘಾತದ ನಂತರ ಹೃದಯ ಸ್ನಾಯುವಿನಲ್ಲಿ ಉಂಟಾಗುವ ಕಲೆಗಟ್ಟು ಕುಕ್ಷಿಯ ಅತಿ ವೇಗ ಬಡಿತಕ್ಕೆಡೆ ಮಾಡಿಕೊಟ್ಟು ಏಕಾಏಕಿ ಸಾವನ್ನುಂಟು ಮಾಡಬಹುದು. ಇಂತಹ ಸಾಧ್ಯತೆಗಳು ಕಿರೀಟ ಧಮನಿಯಲ್ಲಿ ರಕ್ತಹರಿವಿಗೆ ಉಂಟಾಗಿರುವ ಅಡ್ಡಿಯನ್ನು ನಿವಾರಣೆ ಮಾಡುವುದರ ಮೂಲಕ ಮತ್ತು ಆಂಜಿಯೊಟೆನ್ಸಿನ್ ಬದಲುಗೊಳಿಸುವ ಕಿಣ್ವ ವಿರೋಧಿ, ಬೀಟಾತಡೆಗಳು ಮತ್ತು ಸ್ಟ್ಯಾಟಿನ್ ಬಳಕೆಯಿಂದ ಕಡಿಮೆಯಾಗಿವೆ.

ರಕ್ತ ಏರೊತ್ತಡದ ಫಲವಾಗಿ ಎಡ ಹೃತ್ಕುಕ್ಷಿ ಹೆಚ್ಚು ಬೆಳವಣಿಗೆ ಹೊಂದುವುದು. ಅದು ಏಕಾಏಕಿ ಸಾವಿಗೆಡೆ ಮಾಡಿಕೊಡಬಹುದು. ಈ ರೀತಿಯ ಸ್ನಾಯು ಬೆಳವಣಿಗೆಯನ್ನು ವಿದ್ಯುತ್ ಹೃದಯ ಚಿತ್ರ (ಇಸಿಜಿ) ಇಲ್ಲವೆ ಎಕೊ (ಪ್ರತಿ ಧ್ವನಿ) ಹೃದಯ ಚಿತ್ರಗಳು ದೃಢಪಡಿಸುತ್ತವೆ. ಸ್ನಾಯು ಬೆಳವಣಿಗೆ ಕುಕ್ಷಿ ಬಡಿತವನ್ನು ತುಂಬ ವೇಗಗೊಳಿಸಬಹುದು ಹಾಗೂ ಅದರ ತತ್ತರಿಕೆಗೆಡೆ ಮಾಡಿಕೊಡಬಹುದು. ರಕ್ತಒತ್ತಡವನ್ನು ಸೂಕ್ತ ಚಿಕಿತ್ಸೆಯಿಂದ ಹತೋಟಿಯಲ್ಲಿರಿಸಿಕೊಳ್ಳುವುದು ಬಹು ಮುಖ್ಯ.


ಹೃದಯ ಸ್ನಾಯು ರೋಗದಿಂದ ಹಿಗ್ಗಿದ ಹೃದಯವು ಎಡ ಹೃತ್ಕುಕ್ಷಿಯ ಕಾರ್ಯವನ್ನು ಬಹು ಮಟ್ಟಿಗೆ ಕೆಳಕ್ಕಿಳಿಸುವುದು. ಈ ರೋಗ ಕುಕ್ಷಿಯ ಅತಿ ವೇಗಗತಿಯ ಬಡಿತಕ್ಕೆ ಎಡೆಮಾಡಿ ಕೊಡಬಲ್ಲದು; ಹಾಗೂ ಅದು ನಾಡಿ ಬಡಿತವನ್ನು ತುಂಬಾ ನಿಧಾನಗೊಳಿಸಬಲ್ಲದು. ಹೃದಯ ಸ್ನಾಯುರೋಗದಿಂದ ಉಂಟಾಗಬಹುದಾದ ಏಕಾಏಕಿ ಸಾವನ್ನು ತಡೆಗಟ್ಟಲು ಬೀಟಾ ತಡೆಗಳು, ಆಂಜಿಯೊಟೆನ್ಸಿನ್ ಬದಲು ಗೊಳಿಸುವ ಕಿಣ್ವ ವಿರೋಧಿಗಳನ್ನು ಯಶಸ್ವಿಯಾಗಿ ಬಳಕೆ ಮಾಡಬಹುದು.




ಚಿಕ್ಕ ವಯಸ್ಸಿನಲ್ಲಿ ಏಕಾಏಕಿ ಹೃದಯಜನ್ಯ ಸಾವಿಗೆ ಹೃದಯ ಸ್ನಾಯು ಹೆಬ್ಬೆಳವಣಿಗೆ, ಕಿರೀಟ ಧಮನಿಯ ರಚನೆಯಲ್ಲಿನ ವ್ಯತ್ಯಯಗಳು ಮುಖ್ಯ ಕಾರಣಗಳೆನಿಸಿವೆ.

ಏಕಾಏಕಿ ಹೃದಯ ಜನ್ಯ ಸಾವಿನ ಶೇಕಡಾ 5 ರಿಂದ 10 ರೋಗಿಗಳಲ್ಲಿ ಹೃದಯರೋಗ ಗೋಚರಿಸುವುದಿಲ್ಲ. ಬಹುಶಃ ಈ ಸನ್ನಿವೇಶಗಳಿಗೆ ತಳಿ ಜನ್ಯ ಕಾರಣ ಗಳಿರಲಿಕ್ಕೆ ಸಾಕು. ಅದರ ಫಲವಾಗಿ ಹೃದಯದೊಳಗಿರುವ ಕಾಲುವೆಗಳ ರೋಗ ಉಂಟಾಗಿ, ಕಾಲುವೆಗಳ ಕಾರ್ಯದಲ್ಲಿ ವ್ಯತ್ಯಯ ಉಂಟಾಗುತ್ತದೆ. ಇಲ್ಲವೆ ಕಾರ್ಯ ಸಾಮರ್ಥ್ಯದ ಗುಪ್ತ ಬಲದಲ್ಲಿ ಏರುಪೇರಾಗಿರುತ್ತದೆ. ಬೇರೆ ಬೇರೆ ಕಾಯಿಲೆಗಳಲ್ಲಿ ಬಳಕೆ ಮಾಡುವ ಅನೇಕ ಔಷಧಿಗಳು ಹೃದಯ ಸ್ಪಂದನದಲ್ಲಿ ಏರುಪೇರಿಗೆ ಎಡೆಮಾಡಿ ಕೊಡಬಹುದು. ಚಿಕ್ಕ ವಯೋಮಾನದಲ್ಲಿ ಏಕಾಏಕಿ ಹೃದಯಜನ್ಯ ಸಾವು ಹೃದಯ ರಚನೆಯಲ್ಲಿ ಯಾವುದೇ ರೋಗ ಗೋಚರ ವಾಗದಿದ್ದರೂ ಅವರಲ್ಲಿ ತೆಗೆದ ವಿದ್ಯುತ್ ಹೃದಯ ಚಿತ್ರದಲ್ಲಿ ಕೆಲವು ಬದಲಾವಣೆ ಯನ್ನು ಕಾಣಬಹುದು. ಅದು ಮುಂದೆ ಕುಕ್ಷಿಯ ಅತಿವೇಗ ಬಡಿತಕ್ಕೆ ಎಡೆಮಾಡಿ ಕೊಡಲೂಬಹುದು.

ಭಾರತದಲ್ಲಿ ಉತ್ಪಾದಕ ಜೀವನದ ವಯೋಮಾನದಲ್ಲಿರುವವರು ಏಕಾಏಕಿ ಸಾವನ್ನಪ್ಪುತ್ತಿರುವುದು ವಿಪಂಚನೆಗೆ ಕಾರಣ ವಾಗಿದೆ. ಅದರ ಕಾರಣ ಕಿರೀಟ ಧಮನಿರೋಗ ಚಿಕ್ಕ ವಯಸ್ಸಿನಲ್ಲಿ ಕಾಣಬರುತ್ತಿರುವುದು. ಹೃದಯಾಘಾತದ ನಂತರ ಹೆಚ್ಚಿನ ಸಾವು ಕಂಡು ಬರುತ್ತಿದ್ದು, ಈ ರೋಗದ ಬೆಳವಣಿಗೆಯನ್ನು ದೂರ ಮಾಡುವ ಪ್ರತಿರೋಧಕ ಕ್ರಮಗಳನ್ನು ಜೀವನಶೈಲಿಯಲ್ಲಿ ಅಳವಡಿಸಿ ಕೊಳ್ಳುವುದಕ್ಕೆ ಪ್ರಾಶಸ್ತ್ಯವನ್ನು ಕೊಡುವುದಕ್ಕೆ ಮಹತ್ವ ನೀಡಲಾಗಿದೆ.




ಏಕಾಏಕಿ ಹೃದಯ ಸ್ತಬ್ಧಗೊಳ್ಳುವ ಕಾರಣಕ್ಕೆ ಹೃದಯವಲ್ಲದೆ ಬೇರೆ ಕಾರಣಗಳೂ ಉಂಟು ಅವುಗಳಲ್ಲಿ ಶ್ವಾಸಕೋಶಕ್ಕೆ ಸಂಬಂಧಿಸಿದ ಕಾಯಿಲೆಗಳು (ಶ್ವಾಸ ಧಮನಿಯಲ್ಲಿ ಅಡಚಿಕೆ, ಬಿಡದ ಗೂರಲುಬ್ಬಸ, ಉಸಿರುನಾಳದಲ್ಲಿ ಅಡ್ಡಿ, ಗಾಳಿ, ಎದೆ, ಆಕ್ಸಿಜೆನ್ ಪ್ರವಹಾಣದಲ್ಲಿ ಗಣನೀಯ ಇಳಿಕೆ) ಎಲೆಕ್ಟ್ರೊಲೈಟ್ (ಪೊಟ್ಯಾಷಿಯಂ, ಮ್ಯಾಗ್ನಿಷಿಯಂ, ಕಾಲ್ಸಿಯಂ)ಗಳಲ್ಲಿನ ಏರುಪೇರು, ದೇಹದಲ್ಲಿ ಆಮ್ಲತೆಯ ಹೆಚ್ಚಳ, ಮೂತ್ರ ವ್ಯವಸ್ಥೆಯ ಸೋಲು, ರಕ್ತ ಸೋಂಕು(ಸೆಪ್ಸಿಸ್), ರಕ್ತೋದ್ರೇಕ, ವಿಪರೀತ ವಾಂತಿ ಭೇದಿ, ಮೂತ್ರವರ್ಧಕಗಳ ಹೆಚ್ಚಿನ ಬಳಕೆ, ದೇಹದ ಒಗ್ಗದಿಕೆ ಮುಖ್ಯವಾದವುಗಳು.

ರಾಜ್ಯದ ನಾನಾ ಕಡೆ ಗೋಚರಿಸುತ್ತಿರುವ ಹೃದಯಾಘಾತದ ಘಟನೆಗಳು ಉಂಟಾಗುತ್ತಿರುವುದಕ್ಕೆ ಕಾಲ ವ್ಯಯ ಮಾಡದೆ ಕೂಡಲೇ ಚಿಕಿತ್ಸೆಯನ್ನೊದಗಿಸುವ ಸ್ಟೆಮಿ (ಎಸ್.ಟಿ. ಏರಿಕೆಯ ಹೃದಯ ಸ್ನಾಯು ಸಾವು ; ಎಸ್‌ಟಿ ವಿದ್ಯುತ್ ಹೃದಯಚಿತ್ರದ ರೇಖೆಯ ಭಾಗ) ಕಾರ್ಯಕ್ರಮವನ್ನು ಅನೇಕ ತಾಲ್ಲೂಕು ಕೇಂದ್ರಗಳಲ್ಲಿ ಜಾರಿಗೆ ತಂದಿದೆ. ಹೃದಯಾಘಾತ ಹೊಂದಿದವರ ಆರೈಕೆಯನ್ನು ಕೂಡಲೇ ಕೈಗೊಂಡು ಸಾವಿನ ಪ್ರಮಾಣವನ್ನು ಕಡಿಮೆ ಮಾಡುವುದು ಅದರ ಉದ್ದೇಶ. ಚಿಕಿತ್ಸೆ ಕೈಗೊಳ್ಳುವುದು ನಿಧಾನವಾದಷ್ಟು ಸಾವಿನ ಸಂಖ್ಯೆ ಏರುತ್ತದೆ. ಅದಕ್ಕಾಗಿ ಇಸಿಜಿ (ವಿದ್ಯುತ್ ಹೃದಯ ಚಿತ್ರಣ) ರೋಗವನ್ನು ಗುರುತಿಸಿ ಔಷಧಿ ಗಳನ್ನು ನೀಡಿ ಕಿರೀಟ ಧಮನಿ ಯಲ್ಲಿ ರೂಪುಗೊಂಡು ಹೃದಯಾಘಾತಕ್ಕೆ ಕಾರಣವಾದ ರಕ್ತಹೆಪ್ಪುಗೆ (ಕರಣೆ)ಯನ್ನು ಕರಗಿಸುವ ಔಷಧಿ ನೀಡಿ ರಕ್ತ ಹರಿವನ್ನು ಕಾಯ್ದಿರಿಸಲಾಗು ವುದು.

ಈ ಎಲ್ಲಾ ಕಾರಣಗಳಿಗೆ ಸಮಯಯೋಚಿತ ಚಿಕಿತ್ಸೆ ಯನ್ನು ವೈದ್ಯ ನಿರ್ದೇಶನದಲ್ಲಿ ಕೈಕೊಳ್ಳಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಕಿರೀಟ ಧಮನಿ ರೋಗದಲ್ಲಿ. ರಕ್ತ ಪ್ರವಾಹಕ್ಕೆ ಉಂಟಾದ ಅಡ್ಡಿಯನ್ನು ತೆಗೆದು ಹಾಕಿ ರಕ್ತ ಪ್ರವಾಹ ಸರಾಗವಾಗಿ ಜರುಗುವಂತೆ ಕ್ರಮ ಕೈಕೊಳ್ಳ ಬೇಕು. ಔಷಧ ಚಿಕಿತ್ಸೆಯಿಂದ ಹೃದಯದ ಸ್ಪಂದನವನ್ನು ಸರಾಗವಾಗಿರುವಂತೆ ಮಾಡ ಬೇಕು; ಏರಿದ ರಕ್ತ ಒತ್ತಡವನ್ನು ಕೆಳಕ್ಕಿಳಿಸಬೇಕು ಮತ್ತು ಹೃದಯ ತನ್ನ ಸಂಕುಚನದಿಂದ ಹೊರ ಹಾಕುವ ರಕ್ತದ ಪ್ರಮಾಣ ಹೆಚ್ಚುವಂತೆ ಮಾಡಬೇಕು. ಅಗತ್ಯವೆನಿಸಿದ ಕಡೆ ತತ್ತರಿಕೆ ನಿರೋಧಕಗಳ ಅಳವಡಿಕೆಗೆ ಮಾರು ಹೋಗಬೇಕು.

# ವಿಜ್ಞಾನ ಲೋಕ ಚಂದಾದಾರಿಕೆ ಅರ್ಜಿ

ಹೆಸರು: ______________________________

ವಿಳಾಸ: ______________________________

______________________________

______________________________

ಪಿನ್‌ಕೋಡ್ ______________________________

ಇ–ಮೇಲ್: ______________________________

ದೂರವಾಣಿ: ______________________________

ಉದ್ಯೋಗ: ______________________________

ಸಂಸ್ಥೆ: ______________________________

ಚಂದಾದಾರಿಕೆ: ☐ ವೈಯಕ್ತಿಕ ☐ ವಾರ್ಷಿಕ

☐ ಸಾಂಸ್ಥಿಕ ☐ 3 ವರ್ಷಗಳು

| ಚಂದಾದಾರಿಕೆ | ವೈಯಕ್ತಿಕ | ಸಾಂಸ್ಥಿಕ |
|---|---|---|
| ಬಿಡಿ ಪ್ರತಿ | ರೂ. 50/– | – |
| ವಾರ್ಷಿಕ | ರೂ. 300/– | ರೂ. 500/– |
| 3 ವರ್ಷಗಳು | ರೂ. 875/– | ರೂ. 1,500/– |

ಚಂದಾ ಶುಲ್ಕ ಪಾವತಿಸಿದ ವಿವರ: ______________________________

______________________________

MERCHANT NAME: KARNATAKA SCIENCE AND TECHNOL
UPI ID: KSTABANGALORE@SBI

SCAN & PAY

**ಅಕಾಡೆಮಿಯ ಬ್ಯಾಂಕ್ ಖಾತೆ:**

Name: Karnataka Science and Technology Academy
Bank: State Bank of India
A/c No. 64001018807
IFSC: SBIN0009045
Branch: Vidyaranyapura
**UPI ID: KSTABANGALORE@SBI**

ಆಸಕ್ತರು ಭರ್ತಿ ಮಾಡಿದ ಚಂದಾದಾರಿಕೆ ಅರ್ಜಿಯನ್ನು ಪಾವತಿ ಮಾಡಿದ ಶುಲ್ಕದೊಂದಿಗೆ ಅಕಾಡೆಮಿಯ ಇಮೇಲ್: vijnanaloka@gmail.com ಗೆ ಕಳುಹಿಸಿ.